# ಅರಿಯದೆ ಬಂದೆವು ಕಿಂಸನ್

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 34.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
3. Note: Singer has followed these lyrics.

ರಾಗ: ಸಾರಂಗ ತಾಳ: ತ್ರಿಪುಟ

ಅರಿಯದೆ ಬಂದೆವು ಕಿಂಸನ್
ಪರಿಹರಿಸಯ್ಯ ಭಂಸನ್ || ಪ ||

ಪರಿಪರಿಯಿಂದಲೆ ಹರಿ ಹರಿಯೆಂದರೆ
ದುರಿತದ ಭಯ ಒಂದಿಲ್ಲಲ್ಲಾ || ಅಪ ||

ಮತ್ಸ್ಯಾವತಾರಗೆ ಕಿಂಸನ್
ಕೂರ್ಮಾವತಾರಗೆ ಭಂಸನ್
ಸ್ವಚ್ಛಾನಂತನ ಸ್ಮರಣೆಯ ಮಾಡಿದರೆ
ಮೋಕ್ಷಪದವೇಕಲ್ಲಲ್ಲಾ || 1 ||

ಕನಕಾಕ್ಷ ಕೊಂದವಗೆ ಕಿಂಸನ್
ಪ್ರಹ್ಲಾದಗೆ ಒಲಿದಗೆ ಭಂಸನ್
ನಾರಾಯಣ ನಿಮ್ಮ ನಾಮವ ನೆನೆದರೆ
ನರಕದ ಭಯವೊಂದಿಲ್ಲಲ್ಲಾ || 2 ||

ಧರೆಯನಳೆದಗೆ ಕಿಂಸನ್
ಕೊಡಲಿಯ ಪಿಡಿದಗೆ ಭಂಸನ್
ಪರಿಪರಿಯಿಂದಲೆ ಹರಿಹರಿಯೆಂದರೆ

ದುರಿತದ ಭಯವೊಂದಿಲ್ಲಲ್ಲಾ || 3 ||

ರಾವಣನಳಿದಗೆ ಕಿಂಸನ್
ಗೋವಳ ಕೃಷ್ಣಗೆ ಭಂಸನ್
ಭಾವೆ ದ್ರೌಪದಿ ಸಭೆಯಲ್ಯಾಗಭಿ-
ಮಾನವ ಕಾಯ್ದನಲ್ಲಲ್ಲಾ || 4 ||

ಬತ್ತಲೆ ನಿಂತಗೆ ಕಿಂಸನ್
ಮತ್ತಶ್ವವನೇರ್ದಗೆ ಭಂಸನ್
ಸತ್ಯದಿ ಪುರಂದರ ವಿಠಲನ ನೆನೆದರೆ
ಸತ್ಯಲೋಕವಾಯ್ತಲ್ಲಲ್ಲಾ || 5 ||

## ಈ ಹಾಡಿನ ಸಂದರ್ಭ:

ಪುರಂದರ ದಾಸರು ಸೊಲ್ಲಾಪುರದಿಂದ ಪಂಢರಪುರಕ್ಕೆ ಒಮ್ಮೆ ಹೋಗುತ್ತಿದ್ದರು. ಆಗ ಒಂದು ಕಡೆ ಮುಸಲ್ಮಾನರು ತಮ್ಮ ಹಬ್ಬವನ್ನು ಆಚರಿಸುತ್ತಿದ್ದರು. ಅವರು ".... ಕ್ಯಾ ಹುಸ್ಸೇನ್ಸ್ .... ಕಿಮ್ಸನ್...... ಬಾ ಹುಸ್ಸೇನ್ಸ್.... ಭಂಸನ್.... ಅಲ್ಲಾ.... ಅಲ್ಲಾ ...." ಎಂದು ಹಾಡುತ್ತಿದ್ದರು. ದಾಸರನ್ನು ನೋಡಿ ಅವರು ಹತ್ತಿರ ಬಂದರು. ಅವರಿಗೆ ದಸರಾ ಬಗ್ಗೆ ಅವರ ಹಾಡುಗಾರಿಕೆಯ ಬಗ್ಗೆ ಗೊತ್ತಿತ್ತು. ದಾಸರನ್ನು ತಮ್ಮ ಜಾಗಕ್ಕೆ ಕರೆದುಕೊಂಡು ಹೋಗಿ ಅವರಿಗೆ ತಮ್ಮ ದೇವರ ಕುರಿತು ಹಾಡು ಹೇಳಲು ಹೇಳಿದರು. ದಾಸರಿಗೆ ಹಾಡು ಹೇಳದೆ ವಿಧಿ ಇರಲಿಲ್ಲ. ಇವರು ಹರಿದಾಸರು. ಹರಿಯನ್ನು ಕೊಂಡಾಡಲೆಂದೇ ಹಾಡುಗಳನ್ನು ಮತ್ತು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದವರು. ಅವರಿಗೆ ಸಮಯ ಪ್ರಜ್ಞೆ ತುಂಬಾ ಇದ್ದಿರಬೇಕು. ಮುಸಲ್ಮಾನರ ಸಮ್ಮುಖದಲ್ಲಿಯೇ ಈ ಹಾಡನ್ನು ರಚಿಸಿ ಹಾಡಿದರು. "ಅರಿಯದೆ ಬಂದೆವು ಕಿಮ್ಸನ್ ಪರಿಹರಿಸಯ್ಯ ಭಂಸನ್....". ಎಷ್ಟೊಂದು ಸೊಗಸಾದ ಹಾಡು.

**Classification:** Keerthane
**Ankita:** purandara vittala
**Location:** NA
**Category:** Dashavatara

**Sub-Category:** dashavatara, Krishna, smarane, moksha, asura, prahallada, Narayana, naraka, bhaya, bhumi, ravana, govu, draupadi, kudure, satya, loka,

**Pravachana:** NA

**Explanation:** NA